


**ಎಡದಿಂದ ಬಲಕ್ಕೆ:**

1. ಪರರ ಆಶ್ರಯವನ್ನು ಬಯಸುವುದೂ ಇಲ್ಲ ಈ ಋಷಿ (4)
3. ಮೂರೆಣಿಸುವುದರೊಳಗೇ ನಡೆದುಹೋಯಿತು ಕೊಲೆ (3)
7. ಹಗರಣದ ಹಿಂದಿರುವವನೊಬ್ಬ ಪಶು ಪಾಲಕ (4)
8. ಸಾರಿಗೆ ಸರಾಗವಾಗಲು ನೆಲದೊಳಗಿನ ಮಾರ್ಗವೇ? (3)
9. ತಾಳವಾದ್ಯವನ್ನು ನುಡಿಸಿದವನ ಶರೀರ ನೋಡಿದಿರಾ? (2)
12. ಈ ಸೇತುವನ್ನು ನಿರ್ಮಿಸಿದವನ ಮಗ ಗೊತ್ತೇ? (2)
14. ಬಾಯಾರಿಕೆಗೆ ಕೇಳಿದ್ದರಲ್ಲೂ ಏನೀ ಮಿಶ್ರಣ? (3)
15. ಇಲಿ ಬಿಲಗಳಲ್ಲಿ ಅದೇನೋ ಭಾರೀ ಗೊಂದಲ (4)
17. ತರ್ಕ ಮಂಡಿಸುವ ಧ್ವನಿ ಏಕೆ ಇಷ್ಟು ಎತ್ತರ? (3)
18. ಮತ್ತೆ ಮಳೆ ಭೀತಿಯಿಂದ ಭಾರೀ ಸಂಕಟ (4)

**ಮೇಲಿಂದ ಕೆಳಕ್ಕೆ:**

1. ಪ್ರಾಣವೇ ಈ ಜೂಜಿನಲ್ಲಿ ಬಾಜಿ (2)
2. ಶಾಮಣ್ಣನ ನೋವೆಲ್ಲ ಇಲ್ಲವಾಯಿತು (3)
4. ಆ ರಾಣಿಯ ಗುಣದಿಂದ ಅಲ್ಲಿ ಸದಾ ಯುದ್ಧಭೂಮಿ (4)
5. ಅರ್ಥಹೀನ ಮಾತು–ನೆಮ್ಮದಿ ತರುವುದಿಲ್ಲ (3)
6. ವಾಪಸ್ಸು ಬಂದದ್ದರ ಆಚೆ–ಈಚೆ (4)
10. ನಾಡಿಗೇ ಕೇಡಾಗಬೇಕೆಂದಿದ್ದರೆ ಮಾತಿಗೆ ತಪ್ಪು (4)
11. ಸೇಬನ್ನೇ ಕೊಂಚ ಬದಲಿಸಿದರೆ ಒಂದು ಫಲವೃಕ್ಷ (4)
13. ತುಡುಗರ ಕೈಗೆ ಸಿಕ್ಕಿದ್ದು ಇದೇ ಲೋಹದ ಹಾಳೆ (3)
16. ಜಜ್ಜಿ ಬೀಳಿಸಿದಾಗ ಕಂಡಿದ್ದೊಂದು ಬೀಸಣಿಗೆ (3)
17. ತೋಳನ್ನು ಅಲುಗಿಸುವುದರಲ್ಲೇ ಹಾಡಿಗೆ ಲಯ (2)

## ಪದಬಂಧ: 28-10-2010ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅಸಮ್ಮತ; 3. ನಿವಾಸ; 4. ರಹೀಮ; 6. ಹರತಾಳ; 7. ದುಷ್ಟಜನ; 9. ಸುರಾಪಾನ; 12. ಬಿಡುಗಡೆ; 14. ಸದ್ಭಾವ; 15. ಗಾರುಡಿ; 16. ರಸದಾಳಿ.

**ಮೇಲಿಂದ ಕೆಳಕ್ಕೆ:**

1. ಅಸದಳ; 2. ತರದೂರು; 3. ನಿರ್ಧಾರ; 5. ಮನುಜ; 6. ಹಣಕಾಸು; 8. ನಮ್ರನಡೆ; 10. ರಾಕ್ಷಸ; 11. ನಟವರ; 12. ಬಿರುಗಾಳಿ; 13. ಗರಡಿ.

# ಪ್ರಾಣಿ ಪ್ರಪಂಚ

## ‘ಜೇಡ’-ಅದೆಂಥ ಜೀವಿ?

ಜೇಡ–ಅದೊಂದು ಸಂಧಿಪದಿ. ಎಂದರೆ ಅದು ಚೇಳುಗಳಿಗೆ ನಿಕಟ ಸಂಬಂಧಿ. ಸ್ಪಷ್ಟವಾಗಿಯೇ ಜೇಡಗಳು ಕೀಟಗಳಿಂದ ಸಂಪೂರ್ಣ ಭಿನ್ನ. ‘ಎರಡೇ ಖಂಡಗಳ ಶರೀರ, ಎಂಟು ಕಾಲುಗಳ ಅಸ್ತಿತ್ವ ಮತ್ತು ಕುಡಿಮೀಸೆಗಳ ನಾಸ್ತಿತ್ವ’ –ಈ ಮೂರೂ ದೇಹಲಕ್ಷಣಗಳು ಮೇಲ್ನೋಟಕ್ಕೆ ಜೇಡಗಳನ್ನು ಕೀಟಗಳಿಂದ ಬೇರೆಯಾಗಿ ತೋರಿಸುತ್ತವೆ. ಧರೆಯಲ್ಲಿ ಈವರೆಗೆ ಪತ್ತೆಯಾಗಿರುವ ಜೇಡ ಪ್ರಭೇದಗಳು ಮೂವತ್ತಾರು ಸಾವಿರ. ಅವುಗಳ ‘ಜನಸಂಖ್ಯಾ ದಟ್ಟಣೆ’ಯೂ ಕಡಿಮೆ ಏನಿಲ್ಲ. ತೋಟ–ಗದ್ದೆಗಳಲ್ಲಿ ಜೇಡ ದಟ್ಟಣೆ ಪ್ರತಿ ಎಕರೆಗೂ ಸರಾಸರಿ ಇಪ್ಪತ್ತು ಲಕ್ಷ!

ಹೀಗೆ ಜಗದಾದ್ಯಂತ ಕೀಟಗಳಂತೆಯೇ ಅಪಾರ ಸಂಖ್ಯೆಯಲ್ಲಿ ಕಿಕ್ಕಿರಿದಿರುವ ಜೇಡಗಳು ವಾಸ್ತವವಾಗಿ ಕೀಟಗಳ ಪರಮ ಶತ್ರುಗಳು. ಕೀಟಗಳೇ ಜೇಡಗಳ ಪ್ರಮುಖ ಆಹಾರ (ಹಲ್ಲಿ, ಹಕ್ಕಿ, ಕಪ್ಪೆಗಳನ್ನೂ ಬೇಟೆಯಾಡುವ ಬಲಿಷ್ಠ ಜೇಡಗಳೂ ಇವೆ.) ಜೇಡಗಳು ಧರೆಯ ಎಲ್ಲೆಡೆ ಪ್ರತಿದಿನ ಬೇಟೆಯಾಡಿ ಹೀರಿಹಾಕುವ ಕೀಟಗಳ ಒಟ್ಟು ತೂಕ ಭೂಮಿಯಲ್ಲಿರುವ ಎಲ್ಲ ಮನುಷ್ಯರ ಒಟ್ಟೂ ತೂಕವನ್ನು ಮೀರುತ್ತದೆ. ಕೀಟಗಳ ಸಂಖ್ಯಾ ನಿಯಂತ್ರಣದಲ್ಲಿ ಜೇಡಗಳದು ಬಹು ಮುಖ್ಯ ಪಾತ್ರ.

ಅಷ್ಟೇ ಅಲ್ಲದೆ ಜೇಡಗಳು ಪಿಡುಗುಕಾರಕಗಳೂ ಅಲ್ಲ. ಅವು ಯಾವುದೇ ಕಾಯಿಲೆಗಳನ್ನು ಹರಡುವುದಿಲ್ಲ; ಅವು ಪರಾವಲಂಬಿ ಬದುಕನ್ನೂ ನಡೆಸುವುದಿಲ್ಲ. ಅವು ಸಸ್ಯಗಳನ್ನು, ಕೃಷಿ ಬೆಳೆಗಳನ್ನು ತಿನ್ನುವುದಿಲ್ಲ, ಧವಸ–ಧಾನ್ಯಗಳನ್ನು ಹಾಳುಗೆಡಹುವುದಿಲ್ಲ. ಹಾಗಾಗಿ ಅವು ಸಸ್ಯ ಮಿತ್ರ, ರೈತ ಮಿತ್ರ ಜೀವಿಗಳು.

ಧರೆಯಲ್ಲಿ ಜೇಡಗಳದು ನಾಲ್ಕುನೂರು ದಶಲಕ್ಷ ವರ್ಷಗಳ ಇತಿಹಾಸ. ಈ ಸುದೀರ್ಘ ಅಸ್ತಿತ್ವಕ್ಕೆ, ಸರ್ವ ವ್ಯಾಪಕತೆಗೆ, ಯಶಸ್ವೀ ಬದುಕಿಗೆ ಮುಖ್ಯ ಕಾರಣ



ಅವು ತಯಾರಿಸುವ ರೇಷ್ಮೆ. ಆತ್ಮರಕ್ಷಣೆಗೆ, ಸಂತಾನ ವರ್ಧನೆಗೆ ಮತ್ತು ಆಹಾರ ಗಳಿಕೆಗೆ ಜೇಡಗಳಿಗೆ ಅವು ಉತ್ಪಾದಿಸುವ ರೇಷ್ಮೆಯೇ ಮೂಲ ಶಕ್ತಿ.

ಜೇಡಗಳಿಗೆ ದವಡೆಗಳಿಲ್ಲ, ಹಲ್ಲುಗಳಿಲ್ಲ. ತಾವು ಹಿಡಿವ ಬಲಿಗಳನ್ನು ಕಚ್ಚುವ ತುಂಡರಿಸುವ ಜಗಿಯುವ ಕೆಲಸಗಳು ಅವಕ್ಕೆ ಸಾಧ್ಯ ಇಲ್ಲ. ಸೆರೆ ಹಿಡಿದ ಬೇಟೆಗೆ ವಿಷ ಚುಚ್ಚಿ ನಿಶ್ಚೇತನಗೊಳಿಸಿ ಕಿಣ್ವಗಳನ್ನು ಹರಿಸಿ ದೇಹವನ್ನು ಒಳಗೇ ಕರಗಿಸಿ ಹೀರಿಬಿಡುವ ಆಹಾರ ಸೇವನಾ ಕ್ರಮ. ಆದ್ದರಿಂದಲೇ ಜೇಡದ ಬಲೆಗಳಲ್ಲಿ ಕೀಟಗಳ ಶರೀರಗಳ ಸಿಪ್ಪೆಗಳ ದರ್ಶನ ತುಂಬ ಸಾಮಾನ್ಯ. ‘ಟರಾಂಟ್ಯುಲಾ’ದಂಥ ವಿಷಕರ ದೈತ್ಯ, ‘ಬ್ಲ್ಯಾಕ್ ವಿಡೋ’ದಂಥ ಸ್ವಜನ ಭಕ್ಷಕರೂ ಜೇಡ ಸಾಮ್ರಾಜ್ಯದಲ್ಲಿವೆ.

■ ಎನ್. ವಾಸುದೇವ್